# ನ್ಯೂ ಎನರ್ಜಿ-ಅದ್ವೈತ ಸಾಧನೆ

ಸೃಷ್ಟಿಯಲ್ಲಿ ನಮಗೆ ಕಾಣಿಸುವ ಪದಾರ್ಥಗಳೆಷ್ಟೋ ಅಸಂಖ್ಯಾತವಾಗಿ ಇದ್ದಂತೆ ಕಾಣುತ್ತವೆ, ಆದರೆ ಆಳವಾಗಿ ಗಮನವಿಟ್ಟು ನೋಡಿದರೆ ಅವು ಎಷ್ಟೋ ಇಲ್ಲ, ಎಲ್ಲಾ ಸೇರಿ ಒಂದೇ ಪದಾರ್ಥ. ಅದೇನೋ ಅಲ್ಲ, ನನ್ನ ನಿನ್ನ ಸ್ವರೂಪವೇ. ಇದು ಅದ್ವೈತವೆನ್ನುವ ಮಾತಿಗೆ ಅರ್ಥ. ಅಂದರೆ ಇರುವುದು ಒಂದೇ ಉಳಿದೆಲ್ಲವೂ ಅದರ ಪ್ರತಿಬಿಂಬಗಳೇ ಎಂದು ಗ್ರಹಿಸಿದರೆ ಅದು ಅದ್ವೈತ. ಆದರೆ ಒಂದಕ್ಕಿಂತ ಹೆಚ್ಚು ಪದಾರ್ಥಗಳು ವಾಸ್ತವವಾಗಿ ಇವೆಯೆಂದು ಭಾವಿಸಿದರೆ ಅದು ದ್ವೈತವು.

ಇಲ್ಲಿಯವರೆಗೂ ನ್ಯೂ ಎನರ್ಜಿ ಸಾಧನೆಯಲ್ಲಿ ಅನೇಕತ್ವವಾಗಿ ಕಾಣುತ್ತಿರುವ ಪ್ರಪಂಚವನ್ನು ತ್ರಿಗುಣಾತ್ಮಕವಾಗಿ ಕಂಡು 33.33 % ಸಾಧನೆಯನ್ನು ಮಾಡಿದೆವು. ಆದರೆ ಇದು ಶಾಶ್ವತವಾದ ಪರಿಣಾಮವನ್ನು ನಮಗೆ ನೀಡಲಿಲ್ಲ. ಏಕೆಂದರೆ ನಾವು ಇನ್ನೂ ಅನೇಕತ್ವವನ್ನು ಮೂರನ್ನಾಗಿ ವಿಂಗಡಿಸಿ ಕಾಣುತ್ತಿದ್ದೇವೆಯೇ ಹೊರತು ಒಂದಾಗಿ ದರ್ಶಿಸುತ್ತಿಲ್ಲ. ಆದುದರಿಂದ ಈಗ ನಾವು ಮೂರರಿಂದ ಎರಡಕ್ಕೆ, ಎರಡರಿಂದ ಒಂದಕ್ಕೆ ಹಾಗೂ ಒಂದರಿಂದ ನಿಶ್ಶಬ್ದ ಸ್ಥಿತಿಗೆ ತಲುಪಬೇಕು.

"ಹೇಗೆ ಸಿನಿಮಾ ಚಿತ್ರೀಕರಣದ ನಂತರ, ಪ್ರತಿ ದಿನ ನಿರ್ದೇಶಕನೊಂದಿಗೆ ಎಲ್ಲಾ ಪಾತ್ರಧಾರರು ತಮ್ಮ ತಮ್ಮ ವೇಷಗಳನ್ನು ಕಳಚಿಕೊಂಡು ತಮ್ಮ ಸಹಜ ರೂಪಕ್ಕೆ ಬರುತ್ತಾರೋ, ಹಾಗೆಯೇ ಇಲ್ಲಿಯೂ ಸಹ- ಜೀವಿಗಳು, ಜಗತ್ತು, ಈಶ್ವರ ಈ ಮೂವರನ್ನು ದಿನಕ್ಕೆ ಒಮ್ಮೆಯಾದರೂ ವೇಷವನ್ನು ಕಳಚಿದ ವಾಸ್ತವದ ಸೂಕ್ಷ್ಮಸ್ಥಿತಿಯಲ್ಲಿ ನಾವು ಗುರುತಿಸಬೇಕು. ಏಕೆಂದರೆ ಇವೆಲ್ಲವೂ ಜಗನ್ನಾಟಕವಾದ್ದರಿಂದ. ಈಶ್ವರನು-ಸೂತ್ರಧಾರನು, ನಾವು-ಪಾತ್ರಧಾರರು. ಈ ಮೂವರ ವೇಷಗಳನ್ನು ಕಳಚಿ ನೋಡಿದರೆ ನಮಗೆ ಇಬ್ಬರು ಪ್ರತ್ಯಕ್ಷರಾಗುತ್ತಾರೆ. ಸಾಕ್ಷಾತ್ಕಾರ (Realisation) ಹೊಂದಿದವರಿಗೆ ಜೀವಜಗದೀಶ್ವರರು ದಿವ್ಯವಾಗಿ ಕಾಣಿಸುತ್ತಾರೆ. ಇನ್ನುಳಿದವರಿಗೆ ಇದೆಲ್ಲವೂ ಮಾಯಾಪ್ರಪಂಚವಾಗಿ, ಅಥವಾ ವಾಸ್ತವವಾಗಿ ಕಾಣಿಸುತ್ತದೆ. ಇದರಿಂದಾಗಿ ಸಂಸಾರ ಸಾಗರದಲ್ಲಿ ಸಿಲುಕಿ ಒದ್ದಾಡುತ್ತಿರುತ್ತಾರೆ. ಆದುದರಿಂದ ಸ್ಥೂಲದಿಂದ ಸೂಕ್ಷ್ಮದ ಕಡೆಗೆ ಪ್ರಯಾಣವನ್ನು ಮಾಡಿ, ಅತ್ಯಂತ ಸೂಕ್ಷ್ಮವಾದ ಪರಮಾತ್ಮ ಸ್ಥಿತಿಯನ್ನು ಅಥವಾ ಬ್ರಹ್ಮಾನಂದ ಸ್ಥಿತಿಯನ್ನು ಗುರುತಿಸಿ, ಅದೇ ನಾನು ಎಂದು ಅನುಭವಪೂರ್ವಕವಾಗಿ ತಿಳಿದುಕೊಳ್ಳಬೇಕು.

## ಪ್ರಕೃತಿ-ಪುರುಷರ ಸಾಧನೆ

ಆ ಇಬ್ಬರಾರೂ ಅಲ್ಲ ಪ್ರಕೃತಿ-ಪುರುಷರೇ, ಸತ್-ಚಿತ್ತರು, ಚೈತನ್ಯ-ಶಕ್ತಿ, ನಾನು-ಇದ್ದೇನೆ, ಶಿವ-ಶಕ್ತಿಗಳು, ಈಶ್ವರನು-ಮಾಯಾಶಕ್ತಿ.....ಹೀಗೆ ಅನೇಕ ಹೆಸರುಗಳು ಬಳಕೆಯಲ್ಲಿ ಇವೆ. ಸಾಧನೆ ಮಾಡುವುದಕ್ಕಾಗಿ ನಿಮಗಿಷ್ಟವಾದ ಯಾವುದಾದರೊಂದು ಜೋಡಿ ಪದಗಳನ್ನು ಆಯ್ಕೆ ಮಾಡಿಕೊಳ್ಳಿರಿ.

ಈಗ ನಿರಾಕಾರ ಪ್ರಕೃತಿ ಅನೇಕ ರೂಪಗಳಲ್ಲಿ ಕಾಣಿಸುತ್ತದೆ. ಅದೇ ರೀತಿ ಅದಕ್ಕೆ ಸಂಬಂಧಿಸಿದ ಆಲೋಚನೆಗಳು ಅಥವಾ ನಾಮಗಳು ಮನಸ್ಸಿನಲ್ಲಿರುತ್ತವೆ. ಉದಾಹರಣೆಗೆ ನನ್ನ ಹೆಸರು ಶ್ರೀಧರ್, ಇದು ನನ್ನ ಶರೀರ ಎನ್ನುವ ರೂಪಕ್ಕೆ ಇಟ್ಟಿರುವ ಹೆಸರು. ಅಂದರೆ ಶರೀರ ಇದ್ದರೆ ಮಾತ್ರ ಹೆಸರು ಇಡಲು ಸಾಧ್ಯ. ಹೆಸರು ಇದ್ದರೆ ಮಾತ್ರ ಶರೀರವನ್ನು ಗುರುತಿಸಬಹುದು. ಆದ್ದರಿಂದ ನಾಮ-ರೂಪಗಳೆರಡು ಬೇರೆ ಬೇರೆ ಅಲ್ಲ. ಅವು ಒಂದನ್ನೇ ತಿಳಿಯಪಡಿಸುತ್ತವೆ. ಹೀಗೆ ಪ್ರತಿಯೊಂದಕ್ಕೂ ಬಾಹ್ಯವಾಗಿ ರೂಪಗಳು, ಅದೇ ರೀತಿ ಅದಕ್ಕೆ ಸಂಬಂಧಿಸಿ ಮನಸ್ಸಿನಲ್ಲಿ

ಆಲೋಚನೆಗಳು (ಹೆಸರುಗಳು) ಇರುತ್ತವೆ. ಈ ನಾಮ-ರೂಪಗಳು ಎನ್ನುವ ವೇಷಗಳೊಂದಿಗೆ ನಾವು ನಿರಂತರವಾಗಿ ವ್ಯವಹರಿಸುತ್ತಿರುವುದರಿಂದ, ನಮ್ಮ ಸಚ್ಚಿದಾನಂದ ಸ್ವರೂಪವನ್ನು ನಾವು ತಿಳಿದುಕೊಳ್ಳದೇ ಹೋಗುತ್ತಿದ್ದೇವೆ. ಆದುದರಿಂದ ಈಗ ನಮ್ಮೊಳಗೆ ನಟನೆಯನ್ನು ನಿಲ್ಲಿಸಿ ನಾಮ-ರೂಪಗಳೆನ್ನುವ ವೇಷಗಳನ್ನು ಕಳಚಿ ನೋಡಬೇಕು. ಆಗ ನಿರಾಕಾರವಾಗಿ ಪ್ರಕೃತಿ-ಪುರುಷರು ದರ್ಶನವನ್ನು ನೀಡಿ, ಇದೇ ನಮ್ಮ ನಿಜ ಸ್ವರೂಪವೆಂದು ಗುರುತಿಸಿ ಕೊಡುತ್ತಾರೆ.

ನಮಗೆ ಅನೇಕ ರೂಪಗಳು ಕಾಣಿಸುತ್ತಿರುತ್ತವೆ. ಆ ರೂಪಗಳನ್ನು ವಿಶ್ಲೇಷಿಸುವುದನ್ನು ಬಿಟ್ಟುಬಿಡಿ. ನಿರಾಕಾರ ಪ್ರಕೃತಿಯೇ ಅನೇಕ ರೂಪಗಳಲ್ಲಿ ಕಾಣಿಸುತ್ತಿದೆ, ಆದುದರಿಂದ ಯಾವುದನ್ನು ನೋಡಿದರೂ ಅದು "ನಿರಾಕಾರ ಪ್ರಕೃತಿಯೇ" ಎಂದು ಮನಸ್ಸಿನಲ್ಲಿ ಹೇಳಿಕೊಳ್ಳಿರಿ. ಹಾಗೆಯೇ "ನಿರಾಕಾರ ಪುರುಷನು" ಆಲೋಚನೆಗಳಾಗಿ ಮಾರ್ಪಟ್ಟು, ಅವುಗಳ ಮೂಲಕ ಪ್ರಕೃತಿ ರೂಪಗಳನ್ನು ಗುರುತಿಸಿ, ಅವುಗಳೊಂದಿಗೆ ವ್ಯವಹರಿಸುತ್ತಿದ್ದಾನೆ. ಇಲ್ಲಿ ನಿರಾಕಾರ ಪುರುಷನೇ ನಮಗೆ ಆಲೋಚನೆಗಳಂತೆ ದರ್ಶನವನ್ನು ನೀಡುತ್ತಿದ್ದಾನೆ. ಆದುದರಿಂದ ಆಲೋಚನೆಗಳು ಬಂದ ತಕ್ಷಣ ಅದು "ನಿರಾಕಾರ ಪುರುಷನೇ" ಎಂದುಕೊಳ್ಳಿ. ಹೀಗೆ ಬಾಹ್ಯದಲ್ಲಿರುವ ಎಲ್ಲಾ ರೂಪಗಳನ್ನು ನಿರಾಕಾರ ಪ್ರಕೃತಿಯನ್ನಾಗಿ, ನೀವು (ಜೀವಾತ್ಮ) ಮತ್ತು ನಿಮ್ಮಲ್ಲಿ ಬಂದು-ಹೋಗುತ್ತಿರುವ ಆಲೋಚನೆಗಳನ್ನು ನಿರಾಕಾರ ಪುರುಷನೆಂದು ಗುರುತಿಸುತ್ತಾ ಸಾಧನೆಯನ್ನು ಮುಂದುವರೆಸಿರಿ.

ಆಗ ಪ್ರಕೃತಿ-ಪುರುಷರು ವಿಶೇಷವಾಗಿ ಅಲ್ಲದೇ, ನಿರಾಕಾರ ಸಚ್ಚಿದಾನಂದ ಸ್ವರೂಪದಲ್ಲಿ ದರ್ಶನವನ್ನು ನೀಡುತ್ತವೆ. ಅಂದರೆ ಬಾಹ್ಯರೂಪಗಳು ಸುಪ್ತವಾಗಿ - ಆಕಾಶ ಅಥವಾ ನಿರಾಕಾರ ಪ್ರಕೃತಿ ಪ್ರತ್ಯಕ್ಷವಾಗುತ್ತದೆ. ಅದೇ ರೀತಿ ಆಲೋಚನೆಗಳು ಸುಪ್ತವಾಗಿ- ಚೈತನ್ಯ ಅಥವಾ ಪುರುಷನು ಪ್ರತ್ಯಕ್ಷನಾಗುತ್ತಾನೆ. ಇವೆರಡೂ ನಿರಾಕಾರವಾದ್ದರಿಂದ ಎರಡೂ ಬೆರೆತು ಒಂದಾಗಿ ವಿಶಾಲ ಆಕಾಶದಂತೆ ಅಥವಾ ಅನಂತವಾಗಿ ವ್ಯಾಪಿಸಿಕೊಂಡಿರುವ ಪ್ರಕೃತಿ-ಪುರುಷರಾಗಿ ಅನುಭವಕ್ಕೆ ಬರುತ್ತದೆ.

## "ನಾನು" ಸಾಧನೆ

ಇಲ್ಲಿಯವರೆಗೆ ಎಲ್ಲದರಲ್ಲಿರುವ ಇಬ್ಬರನ್ನು ಹೇಗೆ ಗುರುತಿಸಬೇಕೆನ್ನುವುದನ್ನು ಹೇಳಿದೆನು. ಈಗ ಮತ್ತಷ್ಟು ಸೂಕ್ಷ್ಮವಾದ ಒಬ್ಬನನ್ನು ಗುರುತಿಸುವ ಸಾಧನೆಯ ಬಗ್ಗೆ ವಿವರಿಸುತ್ತೇನೆ.

ನಮ್ಮನ್ನು ನಾವು ಇಬ್ಬರನ್ನಾಗಿ ಗುರುತಿಸಿದಾಗ, ಇನ್ನುಳಿದ ಅನೇಕತ್ವಗಳು ಮತ್ತು ಮೂವರು, ಇಬ್ಬರಲ್ಲಿ ರಹಸ್ಯವಾಗಿ ಅವ್ಯಕ್ತವಾಗಿ ಇರುತ್ತವೆ. ಅದೇ ರೀತಿ "ನಾನು ಒಬ್ಬನೆ" "ಚಿದಾನಂದ ಸ್ವರೂಪನು" ಎಂದು ಗುರುತಿಸಿದಾಗ- ಇಬ್ಬರು (2), ಮೂವರು (3), ಅನೇಕ ಎನ್ನುವವು ಒಬ್ಬನಲ್ಲಿ ರಹಸ್ಯವಾಗಿ ಅವ್ಯಕ್ತವಾಗಿ ಇರುತ್ತವೆ.

ಅನೇಕಕ್ಕೆ -----> ಮೂವರು (ಸೃಷ್ಟಿ-ಸ್ಥಿತಿ-ಲಯ ಕರ್ತರು) ಅಧಿಪತಿಗಳಾಗಿ,

ಮೂವರಿಗೆ (3) -----> ಇಬ್ಬರು (ಈಶ್ವರನು-ಮಾಯಾಶಕ್ತಿ) ಅಧಿಪತಿಗಳಾಗಿ,

ಇಬ್ಬರಿಗೆ (೨) -----> ಒಬ್ಬನೇ (ಅರ್ಧನಾರೀಶ್ವರನು) ಅಧಿಪತಿಯಾಗಿ ಇರುತ್ತಾನೆ.

ಆದರೆ ನಿರಾಕಾರ ಪರಮಾತ್ಮ - ಕೇವಲ ಅತೀತವಾಗಿ ಇರುತ್ತಾನೆ.

ಇಲ್ಲಿ ಪರಮಾತ್ಮನು ಅಧಿಪತಿಯಾಗಿ ಇರುವುದಿಲ್ಲ, ಏಕೆಂದರೆ ಅವನು ಅಧಿಕಾರ ಚಲಾಯಿಸುವುದಕ್ಕಾಗಿ ಅವನ ಆಯಾಮದಲ್ಲಿ (ಡೈಮೆನ್ಷನ್ ನಲ್ಲಿ) ಎರಡನೆಯದು ಯಾವುದೂ ಇರುವುದಿಲ್ಲ. ಎಲ್ಲವೂ ತಾನೇ ಆದ್ದರಿಂದ.

ಅವನು ನಿಶ್ಚಲವಾದುದರಿಂದ. ಅರ್ಧನಾರೀಶ್ವರನು, ಈಶ್ವರನು-ಮಾಯಾಶಕ್ತಿ, ರೂಪಗಳಲ್ಲಿ ಇದ್ದರೂ ನಿರಾಕಾರವನ್ನು ಯಾವಾಗಲೂ ಹಿಡಿದುಕೊಂಡೇ ಇರುತ್ತಾನೆ.

"ನಾನು"-ಸಾಧನೆಯನ್ನು ಮಾಡುತ್ತಿರುವಾಗ, ಎಲ್ಲದರಲ್ಲೂ ಕೇವಲ ನಾನು ವನ್ನೇ ಗುರುತಿಸಬೇಕು. ಅಂದರೆ ನಿರಾಕಾರ ಪುರುಷನನ್ನೇ (ಚೈತನ್ಯವನ್ನೇ ಅಥವಾ ಸಾಕ್ಷಿಯನ್ನೇ) ಗುರುತಿಸಬೇಕೆಂದು ಅರ್ಥ. ಹೇಗೆ ಸಂಪೂರ್ಣವಾದ ಬೆಳಕಿನಲ್ಲಿ ಕತ್ತಲು ಕಾಣಿಸುವುದಿಲ್ಲವೋ ಅದೇ ರೀತಿ ಪ್ರಕೃತಿ ಅಥವಾ ಮಹಾಕಾಳಿ ಎನ್ನುವುದು - "ಮಹಾಕಾಲನಲ್ಲಿ" ಅಥವಾ "ಪುರುಷನ ಸ್ವಯಂ (Self)- ಪ್ರಕಾಶದಲ್ಲಿ" ಒಂದಾಗಿ ರಹಸ್ಯವಾಗಿರುತ್ತದೆ. ಪುರುಷನ ಪ್ರಕಾಶ ಕಡಿಮೆಯಾಗುತ್ತಿದ್ದಂತೆ ಪ್ರಕೃತಿ ದರ್ಶನ ಕೊಡುತ್ತದೆ. ಅಂದರೆ ಈ ಮಾಯಾಪ್ರಪಂಚವೆಲ್ಲಾ ಕತ್ತಲೇ. ಇದರಲ್ಲಿರುವ ನಿಶ್ಚಲವಾದ ದಿವ್ಯಪ್ರಕಾಶವು ನಮಗೆ ದರ್ಶನವನ್ನು ನೀಡುತ್ತಿಲ್ಲ. ಅಂದರೆ ಮಾಯಾಪ್ರಪಂಚದಲ್ಲಿ ಪುರುಷನು ಅಥವಾ ಚಿದಾನಂದ ಸ್ವರೂಪನು ರಹಸ್ಯವಾಗಿ ಇದ್ದಾನೆಂದು ಗ್ರಹಿಸಿರಿ. ಅದೇ ರೀತಿ ಇಲ್ಲಿಯವರೆಗೆ ಪ್ರಪಂಚದಲ್ಲಿ ನಾವು ಮುಳುಗಿಹೋಗಿ ನಮ್ಮನ್ನು ನಾವು ಕಳೆದುಕೊಂಡಿದ್ದೇವೆಂದು, ಈಗ ನಾವು ನಾನು-ಶಕ್ತಿಯನ್ನು ಹೆಚ್ಚಿಸಿಕೊಂಡು ಎಲ್ಲವನ್ನು ನಮ್ಮಲ್ಲಿ ಬೆರೆಸಿಕೊಳ್ಳಬೇಕೆಂದು ಗ್ರಹಿಸಿರಿ.

ಆದುದರಿಂದ ಆಲೋಚನೆಗಳೊಂದಿಗೆ ಬಾಹ್ಯದಲ್ಲಿರುವ ಎಲ್ಲವನ್ನೂ, ಅಂದರೆ ಎಲ್ಲಾ ನಾಮ-ರೂಪ-ಕ್ರಿಯೆಗಳನ್ನು "ನಾನು" ಎಂದೇ ಗುರುತಿಸಿರಿ. ಅಂದರೆ ಅದು ನಾನೇ, ಇದು ನಾನೇ, ನಾನು ನಾನೇ, ನೀನು ನಾನೇ; ಅಥವಾ ನಾನು ಪೂರ್ಣವೇ, ನೀನು ಪೂರ್ಣವೇ, ಅದು ಪೂರ್ಣವೇ, ಇದು ಪೂರ್ಣವೇ; ಅಥವಾ ನಾನು ಅಕ್ಷಯ-ಪಾತ್ರನು, ನೀನು ಅಕ್ಷಯ-ಪಾತ್ರನೇ, ಅದು ಅಕ್ಷಯ-ಪಾತ್ರವೇ, ಇದು ಅಕ್ಷಯ-ಪಾತ್ರವೇ.....ಎಂದುಕೊಳ್ಳುತ್ತಾ ಸಾಧನೆಯನ್ನು ಮುಂದುವರೆಸಬೇಕು. ಹೀಗೆ ನಾನೇ ಪರಮಾತ್ಮನು ಎಂದು ಅನುಭವದಲ್ಲಿ ತಿಳಿದುಕೊಳ್ಳುವವರೆಗೂ ಸಾಧನೆಯನ್ನು ನಿರಂತರವಾಗಿ ಮುಂದುವರೆಸಿರಿ, ಇಲ್ಲಿ "ನಾನು"ವಿನಲ್ಲಿ:-ಶಕ್ತಿಯೊಂದಿಗೆ ಇನ್ನುಳಿದ ಪ್ರಪಂಚವೆಲ್ಲವೂ ಸಹ ನಿರಾಕಾರವಾಗಿ ರಹಸ್ಯವಾಗಿ ಅವ್ಯಕ್ತವಾಗಿ ಇವೆ" ಎನ್ನುವ ಭಾವನೆಯಲ್ಲಿ ಇದ್ದು, "ನಾನು-ಸಾಧನೆ"ಯನ್ನು ಮುಂದುವರೆಸಬೇಕೆಂದು ಗ್ರಹಿಸಿರಿ. ಪೂರ್ಣದ ಬಗ್ಗೆ ಮತ್ತಷ್ಟು ಮಾಹಿತಿಗಾಗಿ "ಪೂರ್ಣ" ಟಾಪಿಕ್ ಓದಿ.

ಅದೇ ರೀತಿ ಈ "ನಾನು" ಎನ್ನುವುದು ರೂಪದಿಂದ ಕೂಡಿದ ನಾನು ಅಲ್ಲವಾದ್ದರಿಂದ, ಎಲ್ಲವನ್ನೂ "ನಾನು" ನಾನೆಂದು ಹೇಳಿಕೊಳ್ಳುವುದಿಲ್ಲ. ಒಂದು ವೇಳೆ ರೂಪದಿಂದ ಕೂಡಿದ "ನಾನು" ಆಗಿದ್ದರೆ. ಮೊದಲು ಆ "ನಾನು" ಕರಗಿ ನಿರಾಕಾರ-"ನಾನು" ಆಗಬೇಕು. ಆನಂತರವೇ ಮೇಲೆ ತಿಳಿಸಿದ "ನಾನು-ಸಾಧನೆ" ಮಾಡಬೇಕು. ಕರಗಿಹೋಗುವುದು ಹೇಗೆ ಎನ್ನುವ ವಿಷಯವನ್ನು ತಿಳಿದುಕೊಳ್ಳುವುದಕ್ಕಾಗಿ ಕೆಳಗೆ ಕೊಟ್ಟಿರುವ website ನಲ್ಲಿ ಇರುವ "ಕರಗಿಹೋಗಿ" ಟಾಪಿಕ್ ನ್ನು ಓದಿರಿ.

ಆದುದರಿಂದ ಇಂದಿನಿಂದ ನಟನೆಯನ್ನು ನೋಡುತ್ತಾ ಅಲ್ಲೇ ನಿಲ್ಲದೇ, ಯಾರು ನಟಿಸುತ್ತಿರುವರೋ ಆ ನಟಿಸುವವನನ್ನು ಗುರುತಿಸಲು ಪ್ರಯತ್ನಿಸಿರಿ. ಹಾಗೆಯೇ ರೂಪಗಳನ್ನು ನೋಡುತ್ತಾ ಅಲ್ಲೇ ನಿಲ್ಲದೇ, ಆ ರೂಪಗಳನ್ನು ಯಾರು ಧರಿಸಿದ್ದಾರೋ, ಆ ಧರಿಸಿದವನನ್ನು ಗುರುತಿಸಲು ಪ್ರಯತ್ನಿಸಿರಿ. ಅದೇ ರೀತಿ ಆಲೋಚನೆಗಳನ್ನು ನೋಡುತ್ತಾ ಅವುಗಳೊಂದಿಗೆ ತೃಪ್ತಿಪಡದೇ, ಆಲೋಚಿಸುತ್ತಿರುವವನನ್ನು ಸಹ ಗುರುತಿಸಿರಿ. ಅಂದರೆ ಎಲ್ಲದರಲ್ಲೂ ಇರುವ "ನಾನು" ವನ್ನು ಅಥವಾ ಚಿದಾನಂದ ಸ್ವರೂಪನನ್ನು ಅಂದರೆ ಪರಮಾತ್ಮನನ್ನು ಗುರುತಿಸಬೇಕೆಂದು ಗ್ರಹಿಸಿರಿ. ಆದರೆ ಹೀಗೆ ಎಲ್ಲವನ್ನೂ ಪರಮಾತ್ಮ ಎಂದು ಗುರುತಿಸಿದರೆ ಪರೋಕ್ಷ-ಅನುಭವ (Indirect

Experience) ಉಂಟಾಗುತ್ತದೆ. ಏಕೆಂದರೆ ಪರಮಾತ್ಮನೆಂದಾಗ ಅದು ಎಲ್ಲೋ ಇದ್ದಂತೆ ನಮಗೆ ಅನಿಸುತ್ತದೆ. ಹಾಗಲ್ಲದೇ ಎಲ್ಲದರಲ್ಲೂ ನಿರಾಕಾರನಾಗಿ ನಾನೇ ಇದ್ದೇನೆ, ಎಲ್ಲವೂ ನಾನೇ ಎಂದು ಗುರುತಿಸುತ್ತಾ ಸಾಧನೆಯನ್ನು ನಿರಂತರವಾಗಿ ಮುಂದುವರೆಸಿದರೆ, ಅನಂತವಾಗಿ ವ್ಯಾಪಿಸಿಕೊಂಡು ನಾನಿದ್ದೇನೆ ಎಂದು ಅನುಭವಪೂರ್ವಕವಾಗಿ ತಿಳಿದುಕೊಳ್ಳುತ್ತೀರಿ. ಇದೇ ಅಪರೋಕ್ಷಾನುಭವ ಅಥವಾ ಪ್ರತ್ಯಕ್ಷ ಅನುಭವ ಎಂದರೆ.

## ನಿಶ್ಯಬ್ಧ

ನಂತರ ಆ ನಾನು ಎಂದುಕೊಳ್ಳುವುದನ್ನು ಸಹ ತ್ಯಜಿಸಿ ನಿಶ್ಯಬ್ದವಾಗಿ, ನಿರಾಕಾರವಾಗಿ ಇದ್ದುಬಿಡಿ. ನೀವು "ನಾನು" ಎಂದುಕೊಳ್ಳದಿದ್ದರೂ, ನೀವಿದ್ದೀರೆನ್ನುವ ಅನುಭೂತಿ ಅಥವಾ ಸ್ಪೃಹೆ ಅಥವಾ ಪ್ರಜ್ಞೆ ನಿಮಗೆ ಇರುತ್ತದೆ. ಆಗ "ನಿಮ್ಮಲ್ಲಿ-ಪ್ರಕೃತಿ ಪುರುಷರೊಂದಿಗೆ ಇನ್ನುಳಿದ ಎಲ್ಲವೂ ರಹಸ್ಯವಾಗಿ, ಅವ್ಯಕ್ತವಾಗಿ, ನಿರಾಕಾರವಾಗಿ, ನಿಶ್ಚಲವಾಗಿ ಇದ್ದುಬಿಡುತ್ತವೆ". ಆ ಏಕತ್ವದ ಸ್ಥಿತಿಯಲ್ಲೇ ಬ್ರಹ್ಮಾನಂದವನ್ನು ಅನುಭೂತಿ ಹೊಂದುತ್ತೀರಿ, ಏಕೆಂದರೆ ಅಲ್ಲಿ ಎರಡನೆಯದು ಯಾವುದೂ ಇಲ್ಲವಾದ್ದರಿಂದ. ಆಗ ಅನಂತವಾಗಿ ವ್ಯಾಪಿಸಿಕೊಂಡು ನಾನಿದ್ದೇನೆ ಎಂದು ಅನುಭವಪೂರ್ವಕವಾಗಿ ತಿಳಿದುಕೊಳ್ಳುತ್ತೀರಿ.

ಇಲ್ಲಿ ಶರೀರ ಮತ್ತು ಬಾಹ್ಯ ಪ್ರಪಂಚ : ಅನೇಕತ್ವಕ್ಕೆ ಪ್ರತೀಕ

ಮನಸ್ಸು : ತ್ರಿಗುಣಗಳಿಗೆ ಪ್ರತೀಕ

ಹೃದಯವು : ಈಶ್ವರ- ಮಾಯಾಶಕ್ತಿಗೆ ಪ್ರತೀಕ

ಆತ್ಮವು ; ಅರ್ಧನಾರೀಶ್ವರ ಸ್ಥಿತಿಗೆ ಪ್ರತೀಕ

ಪರಮಾತ್ಮನು- ನಿಶ್ಯಬ್ದಕ್ಕೆ ( ಎಲ್ಲವೂ ಇದ್ದರೂ ಏನೂ ಇಲ್ಲದ ಶೂನ್ಯ) ಪ್ರತೀಕವೆಂದು ಗ್ರಹಿಸಿರಿ.

ಆದುದರಿಂದ ನಿಶ್ಚಲವಾಗಿ ಇರುತ್ತಲೇ ಸತ್ಯ ಸಂಕಲ್ಪದೊಂದಿಗೆ,

ನಿಶ್ಯಬ್ದದಿಂದ -->ಆತ್ಮಕ್ಕೆ --> ಹೃದಯಕ್ಕೆ -->ಮನಸ್ಸಿಗೆ --> ಅನೇಕತ್ವಕ್ಕೆ ಚಲಿಸಿರಿ.

ಆಗಲೇ ನಿಮ್ಮ ಸಮಸ್ಯೆಗಳಿಗೆ ದಿವ್ಯವಾದ ಪರಿಹಾರ ಲಭಿಸುತ್ತದೆ. ಹೀಗೆ ಅನೇಕತ್ವದಿಂದ ಏಕತ್ವಕ್ಕೆ (ಅತೀತದ ಸ್ಥಿತಿಗೆ), ಪುನಃ ಏಕತ್ವ ದೃಷ್ಟಿಯಲ್ಲಿದ್ದೇ ಅನೇಕತ್ವದ ಕಡೆಗೆ ಚಲಿಸುತ್ತಾ, ಅತ್ತ-ಇತ್ತ ಪ್ರಯಾಣಿಸುವಂತಹ ಸಾಧನೆಯನ್ನು ನಿರಂತರವಾಗಿ ಮುಂದುವರೆಸಿರಿ. ಸ್ವಲ್ಪ ಸಮಯದ ನಂತರ ಈ ಪ್ರಯಾಣವನ್ನು ನಿಲ್ಲಿಸಿಬಿಡುತ್ತೀರಿ. ಏಕೆಂದರೆ ನೀವು ಎಲ್ಲಿರುತ್ತೀರೋ ಅಲ್ಲೇ ನೀವು ಏಕತ್ವವನ್ನು ಅಥವಾ ಮುಕ್ತ ಸ್ಥಿತಿಯನ್ನು ಅಥವಾ ಬ್ರಹ್ಮಾನಂದವನ್ನು ಅನುಭವಿಸಲು ಸಾಧ್ಯವಾಗುತ್ತದೆ. ಅಂದರೆ ದ್ವೈತವನ್ನು-ಅದ್ವೈತವನ್ನು ಒಮ್ಮೆಗೇ ಅನುಭೂತಿ ಹೊಂದಲು ಸಾಧ್ಯವಾಗುತ್ತದೆ ಎಂದು ಅರ್ಥ.

ಹಾಗೆಯೇ ನಿಮಗೆ ತಿಳಿದ ವಿಷಯಗಳಲ್ಲಿ ಕೆಲವೊಂದಿಗೆ ಹಿಗ್ಗುತ್ತಿರುತ್ತೀರಿ, ಕೆಲವೊಂದಿಗೆ ಕುಗ್ಗುತ್ತಿರುತ್ತೀರಿ, ಕೆಲವೊಂದಿಗೆ ಸ್ಥಿರವಾಗಿರುತ್ತೀರಿ. ಹಿಗ್ಗುತ್ತಾ-ಕುಗ್ಗುತ್ತಾ ಇರುವಾಗ, ಮೊದಲು ನ್ಯೂ ಎನರ್ಜಿ-ತ್ರಿಗುಣಗಳ 33.33 % ಸಾಧನೆಯನ್ನು ಮಾಡಿ ಸ್ಥಿರತೆಯನ್ನು ಸಾಧಿಸಿಕೊಳ್ಳಿ. ಆನಂತರ ಮೇಲೆ ತಿಳಿಸಿದ ಸಾಧನೆಯನ್ನು ಮಾಡಿರಿ. ಹಾಗೆಯೇ ನೀವು ಸ್ಥಿರವಾಗಿರುವ ವಿಷಯಗಳಲ್ಲಿ ನೇರವಾಗಿ ಮೇಲೆ ತಿಳಿಸಿದ ಸಾಧನೆಯನ್ನು ಮಾಡಿರಿ. ನೀವು ಮೊದಲು ಪ್ರಕೃತಿ-ಪುರುಷರ ಸಾಧನೆಯನ್ನು ಮಾಡಿದ ನಂತರವೇ, "ನಾನು-ಸಾಧನೆ"ಯನ್ನು ಮಾಡಬೇಕೆನ್ನುವ ನಿಯಮವೇನೂ ಇಲ್ಲ. ನೀವು ಆ ಸಮಯದಲ್ಲಿ ಯಾವ ಸಾಧನೆಗೆ ಆಕರ್ಷಿತರಾಗುತ್ತೀರೋ ಆ ಸಾಧನೆಯನ್ನು ಮಾಡಿರಿ. ಹೀಗೆ ಎಲ್ಲಾ ವಿಷಯಗಳಲ್ಲಿ ಮೊದಲು ನೀವು ನಿಶ್ಚಲವಾಗಿ ಇರಲು ಪ್ರಯತ್ನಿಸಿರಿ.

ಅಂದರೆ ನಿಮಗೆ 50% ಪರಮಾತ್ಮನಿಗೆ ಸಂಬಂಧಿಸಿದ ಆಲೋಚನೆಗಳು, 50% ಪ್ರಪಂಚಕ್ಕೆ ಸಂಬಂಧಿಸಿದ ಆಲೋಚನೆಗಳು ಮನಸ್ಸಿನಲ್ಲಿ ಇರಬೇಕು. ಅದೇ ರೀತಿ ಇಲ್ಲಿ ಪರಮಾತ್ಮನಿಗೆ ಸಂಬಂಧಿಸಿದ 50% ಆಲೋಚನೆಗಳಲ್ಲಿ - 16.66% ಜೀವಾತ್ಮನಾಗಿರುವ ನನಗೆ ಸಂಬಂಧಿಸಿದ ಆಲೋಚನೆಗಳು, 16.66% ನನ್ನ ಆತ್ಮಕ್ಕೆ ಸಂಬಂಧಿಸಿದ ಆಲೋಚನೆಗಳು, 16.66% ಪರಮಾತ್ಮನಿಗೆ ಸಂಬಂಧಿಸಿದ ಆಲೋಚನೆಗಳು ಇರಬೇಕೆಂದು; ಅದೇ ರೀತಿ ಪ್ರಪಂಚಕ್ಕೆ ಸಂಬಂಧಿಸಿದ 50% ಆಲೋಚನೆಗಳಲ್ಲಿ- 16.66% ಪಾಸಿಟಿವ್ ಆಲೋಚನೆಗಳು, 16.66% ನೆಗೆಟಿವ್ ಆಲೋಚನೆಗಳು, 16.66% ನ್ಯೂಟ್ರಲ್ ಆಲೋಚನೆಗಳು ಇರಬೇಕೆಂದು ಗ್ರಹಿಸಿರಿ. ಹೀಗೆ ಒಳಗೂ-ಹೊರಗೂ, ಪ್ರಪಂಚ ಮತ್ತು ಪರಮಾತ್ಮನಿಗೆ ಸಂಬಂಧಿಸಿದ ಅನುಭೂತಿಗಳು, ಸದಾ ಅನುಭವದಲ್ಲಿ ಇರಬೇಕೆಂದು ನಿರೀಕ್ಷಿಸಿರಿ. ಅದೇ ರೀತಿ 33.33 % ನ್ಯೂ ಎನರ್ಜಿ ಸಾಧನೆಯನ್ನು ಮಾಡಿ ಪ್ರಶಾಂತ ಸ್ಥಿತಿಗೆ ಬಂದ ನಂತರವೇ, 50% - 50% ಸಾಧನೆ ಮಾಡಬೇಕೆಂದು ಗ್ರಹಿಸಿರಿ. ಆದುದರಿಂದ ಒಮ್ಮೆಗೇ ಬ್ರಹ್ಮಾನಂದ ಸ್ಥಿತಿಯಲ್ಲಿ ಸ್ಥಿರವಾಗಿ ಇರುತ್ತಲೇ ಕರ್ಮಗಳನ್ನು ಸಹ ಮಾಡಲು ಸಾಧ್ಯವಾಗುತ್ತದೆ. ಹಾಗೆ ಇರುತ್ತಾ- ಮಾಡಲ್ಪಟ್ಟಾಗಲೇ ನೀವು ಮುಕ್ತ ಸ್ಥಿತಿಯಲ್ಲಿ ಇದ್ದಂತೆ.

## ನ್ಯೂ ಎನರ್ಜಿ-ಅದ್ವೈತ ಆಹಾರ

ನಾವು ನಿತ್ಯ ಜೀವನದಲ್ಲಿ ಮೂರು ಗುಣಗಳಿಗೆ ಸಂಬಂಧಿಸಿದ ಆಹಾರವನ್ನು ತೆಗೆದುಕೊಳ್ಳಬೇಕು, ಹಾಗೆಯೇ ಪರಮಾತ್ಮನಿಗೂ ಸಹ ಅವಕಾಶವನ್ನು ಕೊಡಬೇಕು. ಅಂದರೆ ನೀವು ಎಷ್ಟು ತಿನ್ನಲು ಸಾಧ್ಯವೋ ಅದರಲ್ಲಿ ಅರ್ಧ ಅಂದರೆ 50% ಮಾತ್ರ ಆಹಾರ ರೂಪದಲ್ಲಿ ತೆಗೆದುಕೊಳ್ಳಬೇಕು, ಇನ್ನುಳಿದ 50% ಖಾಲಿಯಾಗಿ ಇಟ್ಟು ನಿರಾಕಾರನಿಗೆ ಅವಕಾಶ ನೀಡಬೇಕು. ಉದಾಹರಣೆಗೆ ನೀವು ಒಂದು ಹೊತ್ತು ಒಂದು ಕೆ,ಜಿ ಆಹಾರ ಸೇವಿಸುತ್ತೀರೆಂದುಕೊಳ್ಳೋಣ. ಆಗ ನೀವು 166.66 gms ಸಾತ್ವಿಕ ಗುಣದ ಆಹಾರ, 166.66 gms ರಜೋಗುಣದ ಆಹಾರ, 166.66 gms ತಮೋಗುಣದ ಆಹಾರವನ್ನು ಸೇವಿಸಬೇಕು. ಉಳಿದ ಪ್ರಮಾಣದ ಆಹಾರದ ಜಾಗವನ್ನು ಹೊಟ್ಟೆಯಲ್ಲಿ ಖಾಲಿ ಇಡಬೇಕು. ಆಗಲೇ 50% ಶರೀರವು ದಿವ್ಯವಾದ ಶಕ್ತಿಗಳಿಂದ ತುಂಬಿಕೊಂಡಿರುತ್ತದೆ.

ಆಹಾರವನ್ನು ತೆಗೆದುಕೊಳ್ಳುತ್ತಿರುವಾಗ, ಅದರಲ್ಲಿ ಇರುವ ಪಾಸಿಟಿವ್-ನೆಗೆಟಿವ್-ನ್ಯೂಟ್ರಲ್-ಆತ್ಮ-ಪರಮಾತ್ಮರು ಮತ್ತು ನನ್ನಲ್ಲಿರುವ ಪಾಸಿಟಿವ್-ನೆಗೆಟಿವ್-ನ್ಯೂಟ್ರಲ್-ಆತ್ಮ-ಪರಮಾತ್ಮರ ಮಧ್ಯೆ ಮಿಲನ ಏರ್ಪಡಬೇಕೆನ್ನುವ ಭಾವನೆ ಇಟ್ಟುಕೊಂಡು, ದೈವ ಪ್ರಸಾದವನ್ನು ಹೇಗೆ ಸ್ವೀಕರಿಸುತ್ತೀರೋ ಹಾಗೆ ದಿವ್ಯವಾದ ಭಾವನೆಯಿಂದ ತಿನ್ನಿರಿ. ಹೀಗೆ ಎಷ್ಟು ಸಾರಿಯಾದರೂ ನೀವು ತಿನ್ನಬಹುದು. ತ್ರಿಗುಣಗಳ ಬಗ್ಗೆ ಮತ್ತಷ್ಟು ಮಾಹಿತಿಗಾಗಿ ನ್ಯೂ ಎನರ್ಜಿ-ತ್ರಿಗುಣಗಳ-ಆಹಾರ ಎನ್ನುವ ಟಾಪಿಕ್ ನ್ನು ಓದಿರಿ.

### "ನಾನು"-ಸಾಧನೆ

* ನಾನು ಎಂದರೆ ನಿರಾಕಾರ, ವ್ಯಾಪಕ, ನಿಶ್ಚಲ, ನಿರ್ಗುಣ, ಪೂರ್ಣ, ಅಕ್ಷಯ-ಪಾತ್ರ, ಶಾಶ್ವತಾನಂದ.
* ನಾನು ಎಂದರೆ ಅನಂತವಾಗಿ ವ್ಯಾಪಿಸಿಕೊಂಡಿರುವ ಚೈತನ್ಯ-ಶಕ್ತಿ ಗಳ ಮಿಲನ ಅಥವಾ ಪ್ರಕೃತಿ-ಪುರುಷರ ಮಿಲನ.
* ನನ್ನಲ್ಲಿ ಶರೀರ ಇದೆ, ನನ್ನಲ್ಲಿ ಜೀವಜಗದೀಶ್ವರರು ನಿರಾಕಾರವಾಗಿ ಇದ್ದಾರೆ.
* ವಿಶ್ವದಲ್ಲಿ ಎಲ್ಲದರ ಒಳಗೆ-ಹೊರಗೆ-ಅಣುವಣುವಿನಲ್ಲಿ ವ್ಯಾಪಿಸಿಕೊಂಡಿರುವುದು ನಾನೇ.

* ಜೀವಜಗದೀಶ್ವರರಾಗಿ ಕಾಣುತ್ತಿರುವುದು ನಾನೇ.

* ಜಗನ್ನಾಟಕದ ಸೂತ್ರಧಾರನು ನಾನೇ. ಹಾಗೆಯೇ ಅದರಲ್ಲಿಯ ಎಲ್ಲಾ ಪಾತ್ರಗಳನ್ನು ಪೋಷಿಸುತ್ತಿರುವುದು ಸಹ ನಾನೇ.

* ಅದರಿಂದ, ಕೇವಲ ನಾನು ಮಾತ್ರ ಸಚ್ಚಿದಾನಂದ ಸ್ಥಿತಿಯಲ್ಲಿ ಉಳಿದಿದ್ದೇನೆ. ನಾನೇ ಎಲ್ಲಾ-ಎಲ್ಲಾ ನಾನೇ, ನನಗೆ ನಾನೇ ಅನೇಕ ರೂಪಗಳಲ್ಲಿ ನಿತ್ಯವೂ ಕಾಣಿಸುತ್ತಿದ್ದೇನೆ ಎನ್ನುವ ಸ್ಥಿತಿ ಸದಾ ಅನುಭವದಲ್ಲಿ ಇರುತ್ತದೆ.

* ಹೀಗೆ ಮೇಲೆ ಹೇಳಿದಂತೆ ಭಾವಿಸಿದರೆ, 50% ಪರಮಾತ್ಮನಿಗೆ ಸಂಬಂಧಿಸಿದ ಆಲೋಚನೆಗಳು, 50% ಪ್ರಪಂಚಕ್ಕೆ ಸಂಬಂಧಿಸಿದ ಆಲೋಚನೆಗಳು ಮನಸ್ಸಿನಲ್ಲಿ ಇರುತ್ತವೆ. ಹೀಗೆ ಒಳಗೆ-ಹೊರಗೆ, ನಾನೇ ಪ್ರಪಂಚ ಹಾಗೂ ನಾನೇ ಪರಮಾತ್ಮನು ಎನ್ನುವ ಅನುಭೂತಿಗಳು ಸದಾ ಅನುಭವದಲ್ಲಿ ಇರಬೇಕೆಂದು ಆಕಾಂಕ್ಷಿಸಿ. ಆಗ ಒಮ್ಮೆಗೆ ಸಚ್ಚಿದಾನಂದ ಸ್ಥಿತಿಯಲ್ಲಿ ಸ್ಥಿರವಾಗಿ ಇರುತ್ತಲೇ ಕರ್ಮಗಳನ್ನು ಸಹ ಮಾಡಲ್ಪಡಬಲ್ಲಿರಿ.

* ಮೇಲೆ ಹೇಳಿದ ಸಚ್ಚಿದಾನಂದ ಸ್ಥಿತಿಯನ್ನು ಅನುಭವಪೂರ್ವಕವಾಗಿ ತಿಳಿದುಕೊಳ್ಳುವವರೆಗೆ- ನಿಮ್ಮನ್ನು ನೀವು ನ್ಯೂ ಎನರ್ಜಿ-ಅದ್ವೈತ ಸಾಧಕನಾಗಿ ಭಾವಿಸಿ, ಬಾಹ್ಯದಲ್ಲಿ ಮತ್ತು ಅಂತರಂಗದಲ್ಲಿ ಯಾವುದನ್ನು ಗುರುತಿಸುತ್ತಿದ್ದರೂ, ಅದು ನಾನೇ-ಇದು ನಾನೇ ಎಂದು ಭಾವಿಸುತ್ತಾ, ಬ್ರಹ್ಮಾನಂದ ಸ್ಥಿತಿಯು ಪ್ರತ್ಯಕ್ಷವಾಗುವವರೆಗೆ, ಸಾಧನೆಯನ್ನು ನಿರಂತರವಾಗಿ ಮುಂದುವರೆಸಿರಿ.

## ನಿತ್ಯ ಸಾಧನೆ

ನಿತ್ಯ ಜೀವನದಲ್ಲಿ ನಿಜವಾಗಿಯೂ ಇರುವ ಕ್ರಮಗಳು ನಾಲ್ಕೇ. ಅವು ಯಾವುವೆಂದರೆ - ಚಲಿಸುವುದು, ಚಲಿಸದೇ ಇರುವುದು, ಬಾಹ್ಯ ಪ್ರಪಂಚದೊಂದಿಗೆ ವ್ಯವಹರಿಸುವುದು, ನಿದ್ರಿಸುವುದು. ಇಷ್ಟೇ ನಾವು ಪ್ರತಿನಿತ್ಯ ಮಾಡುವ ಕೆಲಸಗಳು. ಈ ನಾಲ್ಕು ಕೆಲಸಗಳಲ್ಲೂ ನಾವು ನಾಲ್ಕು ದೃಷ್ಟಿಗಳಿಂದ ಇರುತ್ತೇವೆ. ಅದರಲ್ಲಿ ಅನಂತವಾಗಿ ವ್ಯಾಪಿಸಿಕೊಂಡು ನಿಶ್ಚಲವಾಗಿ ಬ್ರಹ್ಮಾನಂದ ಸ್ಥಿತಿಯಲ್ಲಿರುವ ನಮ್ಮ ನಿಜ ಸ್ವರೂಪವಾದ ಆತ್ಮದ ದೃಷ್ಟಿಗೆ ಸ್ಥಾನವೇ ಇಲ್ಲ. ಆದುದರಿಂದ ಸಮಸ್ಯೆಗಳಿಗೆ ಸರಿಯಾದ ಪರಿಹಾರ ಲಭಿಸುತ್ತಿಲ್ಲ. ಆದುದರಿಂದ ಇಂದಿನಿಂದ ಈ ವಿಧವಾಗಿ ಇರಲು ಪ್ರಯತ್ನಿಸಿರಿ.

* ಎಲ್ಲಿಗಾದರೂ ಹೋಗುತ್ತಿರುವಾಗ, ನನ್ನ ಆತ್ಮ ಚೈತನ್ಯ ಎನ್ನುವ ನಿಸ್ಚಲಾನಂದ ಸಾಗರದಲ್ಲಿ ಮೇಲೇಳಿದ ಒಂದು ಅಲೆಯೇ (ತರಂಗವೇ) ಹಾಗೆ ಹೋಗುತ್ತಿರುವಂತೆ ಭಾವಿಸಿರಿ.

* ಚಲಿಸದೇ (ಕದಲದೇ) ಇರುವ ಸ್ಥಳದಲ್ಲೇ ಕುಳಿತುಕೊಂಡಿರುವಾಗ, ನಿಶ್ಚಲವಾಗಿ ಅನಂತವಾಗಿ ಸಚ್ಚಿದಾನಂದ ಸ್ಥಿತಿಯಲ್ಲಿ ವ್ಯಾಪಿಸಿಕೊಂಡಿರುವ ನನ್ನ ಆತ್ಮಾನುಭೂತಿ ಎನ್ನುವ ದಾರದಲ್ಲಿ ಸಂಯೋಜಿಸಿದ ಒಂದು ರತ್ನದ ಹಾಗೆ ಇದ್ದಂತೆ ಭಾವಿಸಿರಿ.

* ಇಂದ್ರಿಯಗಳಿಗೂ ಮತ್ತು ಬಾಹ್ಯ ಪ್ರಪಂಚಕ್ಕೆ ಮಿಲನ ಏರ್ಪಡುತ್ತಿರುವಾಗಲೆಲ್ಲಾ, ನನ್ನ ಅನಂತ ಚೈತನ್ಯ ಕನ್ನಡಿಯಲ್ಲಿ ನನ್ನನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ ಎನ್ನುವ ಭಾವನೆಯಲ್ಲಿ ಇರಿ.

* ಇನ್ನು ನಿದ್ರಿಸುತ್ತಿರುವಾಗ, ನಾನು ಈಗ ನನ್ನ ಸಚ್ಚಿದಾನಂದ ಸಾಗರದಲ್ಲಿ ಮುಳುಗುತ್ತಿದ್ದೇನೆಂದು ಭಾವಿಸಿರಿ. ಹೀಗೆ ನಾನೇ ಎಲ್ಲಾ-ಎಲ್ಲಾ ನಾನೇ ಎನ್ನುವ ಭಾವನೆಯಲ್ಲಿ ಜೀವಿಸಲು ಪ್ರಯತ್ನಿಸಿರಿ.

** ಇದನ್ನು ತೆಲುಗು ಭಾಷೆಯಿಂದ ಅನುವಾದಿಸಲ್ಪಟ್ಟಿದೆ. ತೆಲುಗು ಭಾಷೆಯಲ್ಲಿ ಓದಬೇಕೆಂದು ಬಯಸುವವರು ಈ ಲಿಂಕನ್ನು ಕ್ಲಿಕ್ ಮಾಡಿ ಓದಬಹುದು. http://darmam.com/downloads/advaitam/1.0newenergy-advaita-sadhana.pdf

** ನ್ಯೂ ಎನರ್ಜಿ-ಅದ್ವೈತ ಕಾನ್ಸೆಪ್ಟ್ ಅನ್ನು ಕನ್ನಡದಲ್ಲಿ ಕೇಳಬೇಕೆಂದು (To Listen) ಬಯಸುವವರು ಈ ಲಿಂಕನ್ನು ಕ್ಲಿಕ್ ಮಾಡಿ ಕೇಳಬಹುದು (Listen) **https://www.youtube.com/playlist?list=PL7sfndcUtXfluvXK-CsihXrxGyyIjh8n6**

** ನ್ಯೂ ಎನರ್ಜಿ-ಅದ್ವೈತ ಕಾನ್ಸೆಪ್ಟ್ ಅನ್ನು ತೆಲುಗು, ಇಂಗ್ಲೀಷ್, ಕನ್ನಡ, ಹಿಂದಿ ಭಾಷೆಯಲ್ಲಿ ಓದಬೇಕೆಂದು ಬಯಸುವವರು ಈ ಲಿಂಕನ್ನು ಕ್ಲಿಕ್ ಮಾಡಿ ಓದಬಹುದು. http://darmam.com/library.html

**ಈ ಕೆಳಗಿನ ಲಿಂಕನ್ನು ಕ್ಲಿಕ್ ಮಾಡಿ ಆಡಿಯೋಗಳನ್ನು ಕೇಳಿದರೆ ಮತ್ತು ಟಾಪಿಕ್ ಗಳನ್ನು ಓದಿದರೆ ನಿಮಗೆ ನ್ಯೂ ಎನರ್ಜಿ-ಅದ್ವೈತ ಕಾನ್ಸೆಪ್ಟ್ ಸ್ಪಷ್ಟವಾಗಿ ಅರ್ಥವಾಗುತ್ತದೆ. **http://darmam.com/important-topics.html**

**ಕಾಣಿಕೆಗಳು-Donations**

ಈ ನ್ಯೂ ಎನರ್ಜಿ ಕಾನ್ಸೆಪ್ಟ್ ನ್ನು ಆಚರಿಸಿ ಲಾಭ ಪಡೆದವರು ಅಥವಾ ಮತ್ತಾರಾದರೂ ಕಾಣಿಕೆಗಳನ್ನು ನೀಡಬಯಸುವವರು ಈ ಕೆಳಗೆ ತಿಳಿಸಿರುವ ಬ್ಯಾಂಕ್ ಖಾತೆಗೆ ಹಣವನ್ನು ಪಾವತಿಸಬಹುದು. ನಿಮ್ಮ ಸಹಾಯದಿಂದ ನ್ಯೂ ಎನರ್ಜಿ ಜ್ಞಾನವನ್ನು ಅತ್ಯಧಿಕ ಜನರಿಗೆ ತಲುಪಿಸಲು ನಮಗೆ ಪ್ರೋತ್ಸಾಹವನ್ನುಂಟು ಮಾಡುತ್ತದೆ. A/C DETAILS: P.SREEDHAR, STATE BANK OF INDIA, HANUMAKONDA BRANCH, IFSC CODE: SBIN0003422 A/C No: 30603897922. MOBILE No: 9390151912 - THIS NUMBER ALSO HAS GooglePay AND PhonePe.